MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.47 ENGLISH DAILY Subscription Yearly - Rs. - THURSDAY 10-3-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಭಾರತದಿಂದ 5 ಲಕ್ಷ ಟನ್ ಗೋಧಿ ರಫ್ತು ಕರಾರು

**ಭಾರತದಿಂದ 5 ಲಕ್ಷ ಟನ್ ಗೋಧಿ ರಫ್ತು ಕರಾರು ಮಾಡಿಕೊಂಡಿದೆಯೆನ್ನಲಾಗಿದ್ದು, ಈ ವರ್ಷ 7 ಮಿಲಿಯನ್ ಟನ್ ಗೋಧಿ ರಫ್ತು ಮಾಡಲು ತಯಾರಾಗಿದೆಯೆನ್ನಲಾಗಿದೆ.**

## ಅಮೇರಿಕಾ ಜೋಳ ರಫ್ತು ಹೆಚ್ಚಳ

ಹಿಂದಿನ ವರ್ಷಕ್ಕೆ ಹೋಲಿಸಿದಾಗ ಅಮೇರಿಕಾದ ಜೋಳ ರಫ್ತು $ 1.6 (20%) ಹೆಚ್ಚಳವಾಗಿ 2020 ರಲ್ಲಿ $ 9.2 ಬಿಲಿಯನ್ ಗೇರಿದೆಯೆನ್ನಲಾಗಿದೆ. ಚಿಕಾಗೋ ಜೋಳ ದರಗಳು 2021 ಮೇ ತಿಂಗಳಿಂದೀಚಿನ ಗರಿಷ್ಠ ಮಟ್ಟಕ್ಕೇರಿದೆ. ಅಮೇರಿಕಾ ಸೋಯಾಬೀನ್ ರಫ್ತು 2020 ರಲ್ಲಿ ದಾಖಲೆ $ 25.7 ಬಿಲಿಯನ್ ಗೆ ಮುಟ್ಟಿದೆ. ಇದು ಮೌಲ್ಯದಲ್ಲಿ 40 ಶೇಕಡಾ ಹಾಗೂ $ 7 ಬಿಲಿಯನ್ ಹೆಚ್ಚಳ ಹಾಗೂ ಗಾತ್ರದಲ್ಲಿ ಹಿಂದಿನ ವರ್ಷಕ್ಕಿಂತ 23 ಶೇಕಡಾ ಹೆಚ್ಚಳ.

## ವಿಯೆಟ್ನಾಂ ನ ಗೋಡಂಬಿ ರಫ್ತುದಾರರಿಗೆ ರಫ್ತು ವ್ಯವಹಾರದಲ್ಲಿ ಮೋಸ

ವಿಯೆಟ್ನಾಂ ನ ರಫ್ತುದಾರರು ವಿಯೆಟ್ನಾಂ ದಲ್ಲಾಲಿಯ ಮೂಲಕ ಇಟಲಿಗೆ ರಫ್ತು ಮಾಡಿದ 100 ಕಂಟೈನರ್ ಗೋಡಂಬಿ ತಿರುಳಿಗೆ ಇದುವರೆಗೆ ಪಾವತಿ ಬಂದಿಲ್ಲವೆನ್ನಲಾಗಿದ್ದು, ಇದರಿಂದ ವಿಯೆಟ್ನಾಂ ರಫ್ತುದಾರರು ಮಿಲಿಯನ್ ಗಟ್ಟಲೆ ಡಾಲರ್ ನಷ್ಟ ಹೊಂದುವ ಸಂಶಯದಲ್ಲಿದ್ದಾರೆನ್ನಲಾಗಿದೆ. ಕೆಲವು ಕಂಟೈನರ್ ಗಳು ಇಟಲಿ ತಲುಪಿದೆಯೆನ್ನಲಾಗಿದ್ದು, ಕೆಲವು ಸಾಗಾಟದ ಹಾದಿಯಲ್ಲಿದೆಯೆನ್ನಲಾಗಿದೆ.

## ಪ್ರತಿಕೂಲ ಹವಾಮಾನ ಸ್ಥಳೀಯ ಕಚ್ಚಾ ಗೋಡಂಬಿ ಉತ್ಪಾದನೆಗೆ ಹಿನ್ನಡೆ

ಹವಾಮಾನ ವೈಪರೀತ್ಯದಿಂದಾಗಿ ಈ ವರ್ಷ ಸ್ಥಳೀಯವಾಗಿ ಸುಮಾರು ಒಂದೂವರೆಯಿಂದ ಎರಡು ತಿಂಗಳು ವಿಳಂಬಿತವಾಗಿ ಗೋಡಂಬಿ ಮರ ಗಿಡಗಳು ಹೂ ಬಿಡಲಾರಂಭಿಸಿದ್ದು ಉತ್ತಮ ಬೆಳೆಯ ನಿರೀಕ್ಷೆಯಿತ್ತು. ಆದರೆ ಮತ್ತೆ ಮುಂದುವರಿದ ಇಬ್ಬನಿಮಂಜು, ಮೋಡದ ವಾತಾವರಣ ಹೂವು ಕಾಯಿಯಾಗಿ ಫಲಿತವಾಗಿ ಗೋಡಂಬಿಯಾಗಲು ತಡೆಯಾಗಿ ಹೂ ಗಳು ಅಧಿಕ ಪ್ರಮಾಣದಲ್ಲಿ ಒಣಗಿ ಉದುರಿಹೋಗಿದ್ದು ಕಚ್ಚಾ ಗೋಡಂಬಿ ಉತ್ಪಾದನೆ ಇಳಿಕೆಯಾಗುವ ಭಯ ಹುಟ್ಟಿಸಿದೆ.

## ಅಮೇರಿಕಾ ಜೋಳ, ಸೋಯಬೀನ್ ಫೆಬ್ರವರಿ ತಿಂಗಳ ದಾಸ್ತಾನು ಇಳಿಕೆ

ಅಮೇರಿಕಾ ಜೋಳ, ಸೋಯಬೀನ್ ಫೆಬ್ರವರಿ ತಿಂಗಳ ದಾಸ್ತಾನು ಇಳಿಕೆಯಾಗಿದೆ. ಇಥೆನಾಲ್ ತಯಾರಿಕೆಗೆ ಉಪಯೋಗ ಹಾಗೂ ರಫ್ತು ಬೇಡಿಕೆ ಹೆಚ್ಚಳದಿಂದ ದಾಸ್ತಾನು ಇಳಿಕೆಯಾಗಿದೆಯೆನ್ನಲಾಗದೆ. ಸೋಯಬೀನ್ ರಫ್ತು ಬೇಡಿಕೆ ಹೆಚ್ಚಳದಿಂದ ದಾಸ್ತಾನು ಇಳಿಕೆಯಾಗಿದೆಯೆನ್ನಲಾಗದೆ. USDA ಜಾಗತಿಕ ಜೋಳ, ಸೋಯಬೀನ್ ದಾಸ್ತಾನು ಅಂದಾಜು ಇಳಿಕೆ ಮಾಡಿದ್ದು, ಜಾಗತಿಕ ಪೂರೈಕೆಯಲ್ಲಿ ವ್ಯತ್ಯಯವಾದರೆ ದರ ಇನ್ನೂ ಹೆಚ್ಚಳವಾಗುವ ಸಾಧ್ಯತೆಯಿದೆ. ಈಗಾಗಲೇ ದರ ಹೆಚ್ಚಳವಾಗಿದ್ದು, ಪಶು ಆಹಾರ ಹಾಗೂ ಹಕ್ಕಿ ಆಹಾರ ಉತ್ಪಾದನಾ ವೆಚ್ಚದಲ್ಲಿ ಗಣನೀಯ ಹೆಚ್ಚಳವಾಗಿದೆ.